# ಕರ್ನಾಟಕ ಸರ್ಕಾರ

ಸಂಖ್ಯೆ:ಪಪೂಶಿಇ/ಶೈಶಾ-1/2011-2012

ನಿರ್ದೇಶಕರ ಕಛೇರಿ
ಪದವಿ ಪೂರ್ವ ಶಿಕ್ಷಣ ಇಲಾಖೆ,
18ನೇ ಕ್ರಾಸ್, ಸಂಪಿಗೆ ರಸ್ತೆ,
ಮಲ್ಲೇಶ್ವರಂ, ಬೆಂಗಳೂರು-12.
ದಿನಾಂಕ:26-10-2011.

## ಪತ್ರಿಕಾ ಪ್ರಕಟಣೆ

ಕೇಂದ್ರ ಮಾನವ ಸಂಪನ್ಮೂಲ ಅಭಿವೃದ್ಧಿ ಮಂತ್ರಾಲಯವು(MHRD) ಕೊಡಮಾಡುವ ವಿದ್ಯಾರ್ಥಿವೇತನಕ್ಕೆ 2011ನೇ ಸಾಲಿನಲ್ಲಿ ದ್ವಿತೀಯ ಪಿ.ಯು.ಸಿ. ಪರೀಕ್ಷೆಯಲ್ಲಿ ಕೆಳಗೆ ಸೂಚಿಸಿರುವ ಅಂಕಗಳಿಂತ ಹೆಚ್ಚು ಅಂಕ ಪಡೆದಿರುವ ವಿದ್ಯಾರ್ಥಿಗಳಿಂದ ಪದವಿ ಪೂರ್ವ ಶಿಕ್ಷಣ ಇಲಾಖೆಯು 22-09-2011ರಂದು ಅರ್ಜಿ ಆಹ್ವಾನಿಸಿ ಪ್ರಕಟಣೆ ನೀಡಲಾಗಿತ್ತು.

ವಿದ್ಯಾರ್ಥಿಯು ಕಾಲೇಜಿಗೆ ಅರ್ಜಿ ನೀಡಲು ಕೊನೆಯ ದಿನಾಂಕ:25-10-2011 ಹಾಗೂ ಪ್ರಾಂಶುಪಾಲರು ಇಲಾಖೆಗೆ ಅರ್ಜಿ ನೀಡಲು ಕೊನೆಯ ದಿನಾಂಕ:30-10-2011 ಎಂದು ನಿಗದಿಪಡಿಸಲಾಗಿತ್ತು. ವಿದ್ಯಾರ್ಥಿಗಳು ಮತ್ತು ಪೋಷಕರಿಂದ ಬಂದ ಮನವಿಯ ಮೇರೆಗೆ ಕೊನೆಯ ದಿನಾಂಕವನ್ನು ಈ ಕೆಳಕಂಡಂತೆ ವಿಸ್ತರಿಸಲಾಗಿದೆ.

| | |
|---|---|
| ವಿದ್ಯಾರ್ಥಿಯು ಕಾಲೇಜಿಗೆ ಅರ್ಜಿ ನೀಡಲು ಕೊನೆಯ ದಿನಾಂಕ | 10-11-2011 |
| ಪ್ರಾಂಶುಪಾಲರು ಇಲಾಖೆಗೆ ಅರ್ಜಿ ನೀಡಲು ಕೊನೆಯ ದಿನಾಂಕ | 15-11-2011 |

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಕಲೆ, ವಾಣಿಜ್ಯ, ವಿಜ್ಞಾನ ವಿಷಯಗಳಲ್ಲಿ ಅರ್ಜಿ ಸಲ್ಲಿಸಲು ಅರ್ಹರಿರುವ ವಿದ್ಯಾಥಿಗಳ cut off ಅಂಕಗಳನ್ನು ಈ ಕೆಳಕಂಡಂತೆ ನಿಗದಿಪಡಿಸಲಾಗಿದೆ.

| Category | Science(ವಿಜ್ಞಾನ) | | Commerce(ವಾಣಿಜ್ಯ) | | Arts(ಕಲಾ) | |
|---|---|---|---|---|---|---|
| | Boys | Girls | Boys | Girls | Boys | Girls |
| SC | 474 | 474 | 445 | 445 | 423 | 423 |
| ST | 474 | 474 | 445 | 445 | 423 | 423 |
| OBC | 508 | 508 | 466 | 466 | 423 | 423 |
| GM | 508 | 508 | 466 | 466 | 423 | 423 |

ವಿದ್ಯಾರ್ಥಿಗಳು ಪದವಿ ಪೂರ್ವಶಿಕ್ಷಣಇಲಾಖೆಯ ಅಂತರ್ಜಾಲ(www.pue.kar.nic.in)ದಲ್ಲಿ ಅರ್ಜಿಯನ್ನು ಪಡೆದು ಕೊಳ್ಳಬಹುದು. ವಿದ್ಯಾರ್ಥಿಗಳಿಗೆ ಈ ಕುರಿತು ಉದ್ಭವಿಸಬಹುದಾದ ಪ್ರಶ್ನೆಗಳಿಗೆ ಉತ್ತರವನ್ನು ಇಲಾಖೆಯ ವೆಬ್ ಸೈಟ್‌ನಲ್ಲಿನ **FAQನಲ್ಲಿ ಲಾಗಿನ್ ಮಾಡಿ ನೋಡಬಹುದು.**

ಎಲ್ಲಾ ಜಿಲ್ಲಾ ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕರ ಕಛೇರಿಗಳಿಗೆ, ಎಲ್ಲಾ ಇಂಜಿನಿಯರಿಂಗ್ ಹಾಗೂ ಮೆಡಿಕಲ್ ಕಾಲೇಜುಗಳ ಪ್ರಾಂಶುಪಾಲರಿಗೆ, ವಿಶ್ವವಿದ್ಯಾನಿಲಯದ ಎಲ್ಲಾ ರಿಜಿಸ್ಟ್ರಾರ್‌ಗಳಿಗೆ ಈ ಹಿಂದೆಯೇ ಅರ್ಜಿ ನಮೂನೆಯನ್ನು ಕಳುಹಿಸಿ ಅರ್ಹ ವಿದ್ಯಾರ್ಥಿಗಳಿಗೆ ಮಾಹಿತಿ ನೀಡಲು ತಿಳಿಸಲಾಗಿತ್ತು. ವಿದ್ಯಾರ್ಥಿಗಳು ಇವರಿಂದ ಮಾಹಿತಿ ಪಡೆಯಬಹುದು. ನಿಗದಿತ ಅವಧಿಯೊಳಗೆ ಅರ್ಹ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಿ ಈ ಯೋಜನೆಯ ಲಾಭ ಪಡೆಯಲು ತಿಳಿಸಿದೆ. ತಮ್ಮ ಘನತೆವೆತ್ತ ಪತ್ರಿಕೆಯಲ್ಲಿ ಹೆಚ್ಚಿನ ಪ್ರಚಾರ ನೀಡಲು ಕೋರಿದೆ.

(signature) 8/11/11

ನಿರ್ದೇಶಕರು

ಪದವಿ ಪೂರ್ವ ಶಿಕ್ಷಣ ಇಲಾಖೆ.